ದಿಃ 28-06-2022 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.

**ಮುಂದುವರೆದ ಪಾಟೀ ಸವಾಲು ಪ್ರತಿವಾದಿಯರ ಪರ ವಕೀಲರಾದ ಶ್ರೀ ಐ.ಎಸ್. ರವರಿಂದಃ-**

**6.** ಡೊಂಗ್ರು ರಾಮ ಮಹಾರ್, ಪೊನ್ನಪ್ಪ ಗುಂಡಪ್ಪ ಮಹಾರ್, ಮಲ್ಲಪ್ಪ ಸಿದ್ದಪ್ಪ ಮಹಾರ್ ಮತ್ತು ಯಲ್ಲಪ್ಪ ಸಿದ್ದಪ್ಪ ಮಹಾರ್ ರವರು ಟ್ರಸ್ಟಿ ಗಳಾಗಿದ್ದರು ಎಂದರೆ ಸರಿ . ಅದರಲ್ಲಿ ಡೊಂಗ್ರು ಮಹಾರ್ ಎಂದರೆ ನಮ್ಮ ಅಜ್ಜ . ದಿನಾಂಕ 22.02.1979 ರಲ್ಲಿ ನಮ್ಮ ಅಜ್ಜನಾದ ಡೊಂಗ್ರು ರಾಮ ಮಹಾರ್ ರವರು ಮೃತರಾಗಿರುತ್ತಾರೆ ಎಂದರೆ ಸಾಕ್ಷಿಯು ದಿನಾಂಕ 22.02.1972 ರಂದು ಮೃತರಾಗಿರುತ್ತಾರೆ ಎಂದು ನುಡಿಯುತ್ತಾರೆ. ನಮ್ಮ ಅಜ್ಜ ಮೃತರಾಗುವ ಪೂರ್ವದಲ್ಲಿ ನಮ್ಮ ತಂದೆ ದಿನಾಂಕ 27.03.1978 ರಂದು ಮೃತರಾಗಿದ್ದರು ಎಂದರೆ ಸರಿಯಲ್ಲ. Charted Account ರವರ ಮುಂದೆ ಟ್ರಸ್ಟ್ ನೊಂದಣಿ ಸಲುವಾಗಿ ನಮ್ಮ ತಂದೆ ಮತ್ತು ನಮ್ಮ ಅಜ್ಜನ ಹೆಸರನ್ನು ಕಡಿಮೆ ಮಾಡಿ ನನ್ನ ಹೆಸರನ್ನು ದಾಖಲಿಸಲು ವಾರಸಾ ದಾಖಲೆಯನ್ನು ಸಲ್ಲಿಸಿದ್ದೆ ಎಂದರೆ ಸರಿ. ಸದರಿ ವಾರಸಾ ದಾಖಲೆಗಳಲ್ಲಿ ಮಹಾರ್ (ದೇವರಮನಿ) ಎಂದು ಇದೆ ಎಂದರೆ ಸಾಕ್ಷಿಯು ಮಹಾರ್ ಎಂದರೆ ಜಾತಿ, ದೇವರಮನಿ ಎಂದರೆ ನಮ್ಮ ಮನೆತನದ ಅಡ್ಡ ಹೆಸರು ಎಂದು ನುಡಿಯುತ್ತಾರೆ. ನಮ್ಮ ಅಜ್ಜನ ವಾರಸಾ ಪ್ರಮಾಣ ಪತ್ರದಲ್ಲಿ ನಮ್ಮ ತಂದೆ ಹೆಸರು ಮತ್ತು ನಮ್ಮ ತಂದೆಯ ಇನ್ನೊಬ್ಬ ಸಹೋದರನಾದ ಬರ್ಮ ಎಂದು ಇತ್ತು ಎಂದರೆ ಸರಿಯಲ್ಲ. ನಮ್ಮ ಅಜ್ಜನಿಗೆ ಕೇವಲ ನಮ್ಮ ತಂದೆಯವರು ಮಾತ್ರ ಇರುತ್ತಾರೆ ಎಂದು ಖೊಟ್ಟಿಯಾಗಿ ಬರೆಸಿರುತ್ತೇವೆ ಎಂದರೆ ಸರಿಯಲ್ಲ.

**7.** ದಾವೆಯನ್ನು ದಾಖಲಿಸುವ ಪೂರ್ವದಲ್ಲಿ ದೂರನ್ನು ಪ್ರತಿವಾದಿಗಳ ಮೇಲೆ ನೀಡಲಾಗಿತ್ತು ಎಂದರೆ ಸರಿ. ಪ್ರತಿವಾದಿಗಳು ಜಮೀನಿನಲ್ಲಿ ಕೆಲಸ ಮಾಡುತ್ತಿದ್ದರು ಎಂದು

ದೂರನ್ನು ನೀಡಿದ್ದೆವು ಎಂದರೆ ಸರಿಯಲ್ಲ. ಪೊಲೀಸರು ಪ್ರತಿವಾದಿಗಳನ್ನು ಮತ್ತು ನಮ್ಮನ್ನು ಠಾಣೆಗೆ ಕರೆಯಿಸಿ ವಿಚಾರಣೆ ಮಾಡಿದ್ದರು ಎಂದರೆ ಸರಿ. ಪೊಲೀಸರು ಸಿವಿಲ್ ವ್ಯಾಜ್ಯ ಇರುವ ಕಾರಣ ನ್ಯಾಯಾಲಯಕ್ಕೆ ದಾವೆಯನ್ನು ಸಲ್ಲಿಸಲು ತಿಳಿಸಿದ್ದರು ಎಂದರೆ ಸರಿಯಲ್ಲ . ನಾನು ದಾವಾ ಜಮೀನನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಗೆ ಮೂರು ಛಾಯಚಿತ್ರಗಳನ್ನು ತೋರಿಸಲಾಗಿ ಸಾಕ್ಷಿಯು ಅವುಗಳು ಜಮೀನುಗಳು ಇರುತ್ತವೆ ಎಂದು ನುಡಿಯುತ್ತಾರೆ. ಸದರಿ ಛಾಯಚಿತ್ರಗಳಲ್ಲಿ ಪ್ರತಿವಾದಿ ಸಂಖ್ಯೆ 4 ರವರು ಕೆಲಸ ಮಾಡುವುದು ಕಾಣುತ್ತದೆ ಎಂದರೆ ಸಾಕ್ಷಿಯು ಇಲ್ಲ ಎಂದು ನುಡಿಯುತ್ತಾರೆ. ಛಾಯಚಿತ್ರಗಳಲ್ಲಿ ಕಾಣುವ ಕಬ್ಬಿನ ಬೆಳೆಯು ಈಗಿನ ಬೆಳೆ ಎಂದರೆ ಸರಿ. ಸಾಕ್ಷಿಯು ಮುಂದುವರೆದು ನಾವು ಬೆಳೆದ ಬೆಳೆ ಎಂದು ನುಡಿಯುತ್ತಾರೆ. ನಾವು ಕಬ್ಬಿನ ಬೆಳೆಯನ್ನು ಬೆಳೆದಿರುತ್ತೇವೆ ಎಂದು ತೋರಿಸಲು ನ್ಯಾಯಾಲಯಕ್ಕೆ ಛಾಯಚಿತ್ರಗಳನ್ನು ಹಾಜರುಪಡಿಸಲು ಯಾವುದೇ ತೊಂದರೆ ಇಲ್ಲ. ಸದರಿ ಛಾಯಚಿತ್ರಗಳಲ್ಲಿ ಕಾಣುತ್ತಿರುವ ವ್ಯಕ್ತಿಯು ಯಾರು ಎಂದು ನನಗೆ ಗೊತ್ತಾಗುವುದಿಲ್ಲ. ನನಗೆ ಪ್ರತಿವಾದಿಯರು ಯಾರು ಎಂದು ಗೊತ್ತಿಲ್ಲ.

**8.** ದಾವಾ ಆಸ್ತಿಯ ಮಧ್ಯೆದಲ್ಲಿ ಯಾವ ರಸ್ತೆ ಹೋಗಿರುತ್ತದೆ ಎಂದು ನನಗೆ ಗೊತ್ತು. ಸದರಿ ರಸ್ತೆಯ ಎಡಕ್ಕೆ ಮತ್ತು ಬಲಕ್ಕೆ ಆಸ್ತಿ ಇರುತ್ತದೆ ಎಂದರೆ ಸರಿ . ದಾವಾ ಆಸ್ತಿಯ ಚೆಕ್ಕುಬಂಧಿಯಲ್ಲಿ ಸದರಿ ರಸ್ತೆಯ ಬಗ್ಗೆ ತೋರಿಸಿರುವುದಿಲ್ಲ ಎಂದರೆ ಸರಿ . ಪ್ರತಿವಾದಿಯು ಪ್ರತಿವಾದ ಪತ್ರವನ್ನು ಸಲ್ಲಿಸುವ ಸಂದರ್ಭದಲ್ಲಿ ಹಾಜರುಪಡಿಸಿದ ಛಾಯಚಿತ್ರಗಳಲ್ಲಿ ಕಾಣುವ ಬೆಳೆ ಮೆಕ್ಕೆ ಜೋಳದ ಬೆಳೆ ಇರುತ್ತದೆ ಎಂದರೆ ಸರಿ , ಸದರಿ ಛಾಯಚಿತ್ರಗಳಲ್ಲಿ ಪ್ರತಿವಾದಿಯರುಗಳು ಮೆಕ್ಕೆ ಜೋಳದ ಬೆಳೆಯ ಕೆಲಸವನ್ನು ಮಾಡುತ್ತಿರುತ್ತಾರೆ ಮತ್ತು ಪ್ರತಿವಾದಿಯರು ಕಂಡು ಬರುತ್ತಾರೆ ಎಂದರೆ ಸರಿಯಲ್ಲ. 1982 ರಿಂದ ದಾವಾ ಆಸ್ತಿಯಲ್ಲಿ

ಪ್ರತಿವಾದಿಗಳು ಕಬ್ಜೆಯಲ್ಲಿರುತ್ತಾರೆ ಎಂದರೆ ಸರಿಯಲ್ಲ. ನಾವು ದಾವಾ ಆಸ್ತಿಯಲ್ಲಿ ಕಬ್ಜೆ ಇಲ್ಲದೆ ಇರುವುದರಿಂದ ಈವರೆಗೂ ನ್ಯಾಯಾಲಯಕ್ಕೆ ಯಾವುದೇ ಛಾಯಚಿತ್ರಗಳ ದಾಖಲೆಗಳನ್ನು ಹಾಜರುಪಡಿಸಿರುವುದಿಲ್ಲ ಎಂದರೆ ಸರಿಯಲ್ಲ.

**9.** ನಾವು ದಾವಾ ಷೆಡ್ಯೂಲ್ ಆಸ್ತಿಯನ್ನು ನೋಡದೆ ಇದ್ದರೂ ಮತ್ತು ದಾವಾ ಷೆಡ್ಯೂಲ್ ಆಸ್ತಿಯಲ್ಲಿ ಸ್ವಾಧೀನ ಇಲ್ಲದೆ ಇರುವುದರಿಂದ ಸರಿಯಾದ ಚೆಕ್ಕುಬಂಧಿಯನ್ನು ನಾನು ಹೇಳಿರುವುದಿಲ್ಲ ಎಂದರೆ ಸರಿಯಲ್ಲ . ನಾವು ದಾವಾ ಆಸ್ತಿಯಲ್ಲಿ ಕಬ್ಜೆ ಇಲ್ಲದೆ ಇರುವುದರಿಂದ 1972 ರಲ್ಲಿಯೇ ನಮ್ಮ ತಂದೆ ಮತ್ತು ನಮ್ಮ ಅಜ್ಜ ಮೃತರಾಗಿದ್ದರೂ 2011 ರವರೆಗೆ ಯಾವುದೇ ವಾರಸಾ ಮಾಡಿಕೊಂಡಿರುವುದಿಲ್ಲ ಎಂದರೆ ಸರಿಯಲ್ಲ . ನಾವು ಯಾವಾಗ ಪಹಣಿಯನ್ನು ಪಡೆದಿರುತ್ತೇವೆಯೋ ಆಗ ಪ್ರತಿವಾದಿಯರ ಕಬ್ಜೆಗೆ ತೊಂದರೆ ಕೊಡಲು ಪ್ರಾರಂಭಿಸಿದೆವು ಎಂದರೆ ಸರಿಯಲ್ಲ, ಸಾಕ್ಷಿಯು ಮುಂದುವರೆದು ನಮ್ಮ ಹಿರಿಯರ ಕಾಲದಿಂದಲೂ ನಾವು ಕಬ್ಜೆಯಲ್ಲಿ ಇರುತ್ತೇವೆ ಎಂದು ನುಡಿಯುತ್ತಾರೆ . ನಾವು ಪ್ರತಿವಾದಿಯರಿಗೆ ತೊಂದರೆ ಕೊಟ್ಟಿದ್ದರಿಂದ ಪ್ರತಿವಾದಿಯರು ನಮ್ಮ ವಿರುದ್ಧ ಪೊಲೀಸ್ ಠಾಣೆಯಲ್ಲಿ ದೂರು ಸಲ್ಲಿಸಿದ್ದರು ಎಂದರೆ ಸಾಕ್ಷಿಯು ನಾವೂ ದೂರನ್ನು ಕೊಟ್ಟಿದ್ದೆವು ಎಂದು ನುಡಿಯುತ್ತಾರೆ.

**10.** ದಿನಾಂಕ 12.07.1982 ರಂದು ನಾನು ಮತ್ತು ನನ್ನ ಸಹೋದರರು ಹಿರಿಯರ ಸಮ್ಮುಖದಲ್ಲಿ ಸ್ವತಹಃ ಪ್ರತಿವಾದಿಯರಿಗೆ ದಾವಾ ಆಸ್ತಿಯನ್ನು ಬಿಟ್ಟುಕೊಟ್ಟಿದ್ದೆವು ಎಂದರೆ ಸರಿಯಲ್ಲ. ನಾವು ದಾವಾ ಆಸ್ತಿಯಲ್ಲಿ ಕಬ್ಜೆ ಇಲ್ಲದೆ ಪ್ರತಿವಾದಿಯರಿಗೆ ತೊಂದರೆ ಕೊಟ್ಟಿದ್ದರಿಂದ ನಾವು ಸುಳ್ಳು ದಾವೆಯನ್ನು ಸಲ್ಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ .

ಪಹಣಿಯನ್ನು ಹೊರತುಪಡಿಸಿ ಕಬ್ಜೆಗೆ ಸಂಬಂಧಪಟ್ಟಂತೆ ಬೇರೆ ಯಾವುದೇ ದಾಖಲೆಗಳು ಇರುವುದಿಲ್ಲ.

**ಮರು ವಿಚಾರಣೆ ಇಲ್ಲ.**

**(ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)**

**ಓ.ಹೇ.ಕೇ ಸರಿಯಿದೆ.**
**ಸಹಿ/-**
**3 ನೇ ಹೆಚ್ಚುವರಿ ಸಿವಿಲ್ ಮತ್ತು ಜೆಎಂಎಫ್‌ಸಿ ನ್ಯಾಯಾಧೀಶರು,**
**ಬೆಳಗಾವಿ.**